## ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ.

## ಸಿ.ಸಿ.ಸಂಖ್ಯೆ.1410/2023

ಫಿರ್ಯಾದುದಾರು : ಶ್ರೀಮತಿ ಫಾತಿಮ,
ತಂದೆಃ ಪೌತಿ ನಜೀರ್,
ಪ್ರಾಯಃ 41 ವರ್ಷ,
ವಾಸಃ ಮೈಸೂರಮ್ಮ ನಗರ,
ಗೋಣಿಕೊಪ್ಪಲು, ಕೊಡಗು.

**---ವಿರುದ್ಧ –**

ಆರೋಪಿ : ಶ್ರೀ ನಾಗೇಶ್,
ತಂದೆಃ ದೊರೆಸ್ವಾಮಿ,
ಪ್ರಾಯಃ 47 ವರ್ಷ,
ಇಂಚರ ಕೊಡಗು ಚಾನೆಲ್,
ಶ್ರೀ ವೆಂಕರೇಶ್ವರ ನಿಲಯ,
ಸೆಂಟ್ ಥಾಮಸ್ ಸ್ಕೂಲ್ ರಸ್ತೆ,
ಕಾವೇರಿ ಹಿಲ್ಸ್, ಗೋಣಿಕೊಪ್ಪ.

**ಆರೋಪಿಯಾದ ನಿಮ್ಮ ವಿರುದ್ಧ ಇರುವ ಆಪಾದನೆ ಏನೆಂದರೆ**

ಆರೋಪಿಯಾದ ನೀವು ಪಿರ್ಯಾದಿದಾರರಾದ ಶ್ರೀಮತಿ ಫಾತಿಮ,, ಅವರಿಂದ ನಿಮ್ಮ ಹಣಕಾಸಿನ ಅಗತ್ಯಕ್ಕಾಗಿ 2023 ನೇ ಇಸವಿಯ ಮೇ ಮೊದಲನೆ ವಾರದಲ್ಲಿ ರೂ.1,50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿದಾರರು ಸಾಲವನ್ನು ಮರುಪಾವತಿಸುಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗೋಣಿಕೊಪ್ಪ ಶಾಖೆಯ 806390 ನಂಬರಿನ ಚೆಕ್ಕನ್ನು ಸಾಲದ ಬಾಧ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ಕೆನರ ಬ್ಯಾಂಕ್, ಗೋಣಿಕೊಪ್ಪ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು ದಿಃ10.07.2023ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದಿದಾರರು ತಮ್ಮ ವಕೀಲರ ಮೂಖಾಂತರ 15 ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿಃ 31.07.2023 ರಂದು ಕಾನೂನು ರೀತಿಯ ನೋಟಿಸನ್ನು ನೀಡಿದ್ದರು ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದಿದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೆಯ ಲಿಖಿತಗಳ

ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು.

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿಃ12.08.2025 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

Sd/-
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,